# ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ರವರ ಕಛೇರಿ,
## ಅಧೀಕ್ಷಕ ಅಭಿಯಂತರರು (ವಿ)., ಕಾರ್ಯ ಮತ್ತು ಪಾಲನಾ ವೃತ್ತ, ಜೆಸ್ಕಾಂ, ಕೊಪ್ಪಳ.

ಕಾರ್ಯ ಸ್ಥಾನ, ಮುನಿರಾಬಾದ. E-mail ID : seemrbgescom@gmail.com. ಫೋ.ನಂ : 08539-270276


ಸಂಖ್ಯೆ: ಅಅಂ(ವಿ)/ಉಲೆನಿ/ಲೆಅ/ಸಲೆಅ/ಹಿಸ(ಸಿ)/ಕೆ-47/19-20/3378 ದಿನಾಂಕ: 14.01.2020

## ಪತ್ರಿಕಾ ಪ್ರಕಟಣೆ

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಕೊಪ್ಪಳ ಕಾರ್ಯಸ್ಥಾನ ಮುನಿರಾಬಾದ್ ವೃತ್ತದಲ್ಲಿ ಒಟ್ಟು 26 ಮೈಕ್ರೋ ಫೀಡರ್ ಫ್ರಾಂಚೈಸಿ (ಗ್ರಾಮ ವಿದ್ಯುತ್ ಪ್ರತಿನಿಧಿ) ಹುದ್ದೆಗಳು ಖಾಲಿಯಿದ್ದು, ಆಸಕ್ತಿಯುಳ್ಳ ಅಭ್ಯರ್ಥಿಗಳು ಸಂಬಂಧಪಟ್ಟ ವಿಭಾಗೀಯ ಕಛೇರಿಗೆ ಅರ್ಜಿ ಸಲ್ಲಿಸಬಹುದು.

**ಷರತ್ತುಗಳು :-**

1. ಅಭ್ಯರ್ಥಿಯು ಯಾವ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೈಕ್ರೋ ಫೀಡರ್ ಫ್ರಾಂಚೈಸಿ ಆಗಬಯಸುತ್ತಾನೆಯೋ ಆ ಗ್ರಾಮ ಪಂಚಾಯಿತಿಯ ಖಾಯಂ ನಿವಾಸಿಯಾಗಿರಬೇಕು (ತಹಶೀಲ್ದಾರ ಕಛೇರಿಯಿಂದ ನೀಡಲ್ಪಟ್ಟ ಪ್ರಮಾಣ ಪತ್ರ ಕಡ್ಡಾಯವಾಗಿ ಸಲ್ಲಿಸಬೇಕು.
2. ಅಭ್ಯರ್ಥಿಗಳು ಪ್ರಕಟಣೆಯ ದಿನಾಂಕದಂದು 18 ವರ್ಷ ವಯಸ್ಸು ತುಂಬಿರಬೇಕು ಹಾಗೂ 35 ವರ್ಷ ಮೇಲ್ಪಟ್ಟಿರಬಾರದು.
3. ಅಭ್ಯರ್ಥಿಯು ಕನಿಷ್ಠ ಯಾವುದಾದರೂ ಒಂದು ವಿದ್ಯಾರ್ಹತೆಯನ್ನು ಹೊಂದಿರಬೇಕು. ಡಿಪ್ಲೊಮಾ, ಐ.ಟಿ.ಐ., ಜೆ.ಓ.ಸಿ., ಪಿ.ಯು.ಸಿ., ಎಸ್.ಎಸ್.ಎಲ್.ಸಿ (ಡಿಪ್ಲೊಮಾ, ಐ.ಟಿ.ಐ. ಜೆ.ಓ.ಸಿ. ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆಯಿರುತ್ತದೆ.)
4. ಅಭ್ಯರ್ಥಿಗೆ ಕಡ್ಡಾಯವಾಗಿ ಕನ್ನಡ ಓದಲು ಮತ್ತು ಬರೆಯಲು ಬರಬೇಕು.
5. ಈಗಾಗಲೇ ನೇಮಕಗೊಂಡಿರುವ ಮೈಕ್ರೋ ಫೀಡರ್ ಫ್ರಾಂಚೈಸಿಗಳಿಗೆ ಈ ಹುದ್ದೆಗೆ ಅರ್ಹರಿರುವುದಿಲ್ಲ.
6. ಸ್ತ್ರೀ ಶಕ್ತಿ ಸ್ವಸಹಾಯ ಗುಂಪಿನ ಸದಸ್ಯರಿಗೆ ಆದ್ಯತೆಯಿರುತ್ತದೆ. ಸಂಘದ ಸದಸ್ಯತ್ವ ಪ್ರಮಾಣ ಪತ್ರ ಹೊಂದಿರಬೇಕು. ಆಯ್ಕೆಯಾದ ಅಭ್ಯರ್ಥಿಗಳು ಇಂಧನ ಇಲಾಖೆಯಿಂದ ಏಕರೂಪವಾಗಿ ಪರಿಷ್ಕರಿಸಿದ ಎಮ್.ಓ.ಯು. ಪ್ರಕಾರವೇ ಬ್ಯಾಂಕ್ ಗ್ಯಾರಂಟಿಯನ್ನು ಸಲ್ಲಿಸಬೇಕು.
7. ಮೈಕ್ರೋ ಫೀಡರ್ ಫ್ರಾಂಚೈಸಿ ನೇಮಕಾತಿಗಾಗಿ ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳಿಗೆ ನಿಗದಿತವಾದ ದಿನಾಂಕದಂದು ಸಣ್ಣ ಮಟ್ಟ ಲೆಕ್ಕಗಳ ಬಗ್ಗೆ ಕಿರು ಪರೀಕ್ಷೆ ನಡೆಸಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಪಡೆದ ಅಂಕ ಹಾಗೂ ವಿದ್ಯಾಭ್ಯಾಸದಲ್ಲಿ ಪಡೆದ ಅಂಕದ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ಪರೀಕ್ಷೆಯನ್ನು ಸಾಮೂಹಿಕವಾಗಿ ಒಂದೇ ದಿನಾಂಕದಂದು ನಿಗಮ ಕಛೇರಿಯ ನೇತೃತ್ವದಲ್ಲಿ ನಿರ್ವಹಿಸಲಾಗುವುದು.
8. ಅಭ್ಯರ್ಥಿಗಳು ಸ್ಥಾವರಗಳ ವಿದ್ಯುತ್ ಮಾಪಕ ಓದಲು ಹಾಗೂ ವಿದ್ಯುತ್ ಬಿಲ್ಲು ವಸೂಲಾತಿಯನ್ನು ಮಾಡಲು ಹಾಗೂ ಲೆಕ್ಕಗಳ ಬಗ್ಗೆ ಪರಿಣಿತಿಯನ್ನು ಹೊಂದಿರಬೇಕು.

**ಅರ್ಜಿ ಸಲ್ಲಿಸುವ ಬಗ್ಗೆ:**

1. ಅರ್ಜಿ ಅಭ್ಯರ್ಥಿಗಳು ಈ ಕೆಳಗೆ ಪ್ರಕಟಣೆಗೊಂಡ ಅರ್ಜಿ ನಮೂನೆಯಲ್ಲಿ ತಯಾರಿಸಿ ಭರ್ತಿ ಮಾಡಿ ಅದರ ಜೊತೆಗೆ ಅನ್ವಯಿಸುವ ಪ್ರಮಾಣ ಪತ್ರಗಳ ಸ್ವಯಂ ದೃಢೀಕೃತ ನಕಲು ಪ್ರತಿಗಳೊಂದಿಗೆ ದಿನಾಂಕ 31.01.2020 ರೊಳಗಾಗಿ ನೊಂದಣಿ ಅಂಚೆ ಅಥವಾ ಖುದ್ದಾಗಿ ಬಂದು ವಿಭಾಗೀಯ ಕಛೇರಿಗೆ ಸಲ್ಲಿಸತಕ್ಕದ್ದು, ಹಾಗೂ ಅಂಚೆ ಚೀಟಿಯ ಲಕೋಟೆಯ ಮೇಲೆ "ಮೈಕ್ರೋ ಫೀಡರ್ ಫ್ರಾಂಚೈಸಿ" ಹುದ್ದೆಗೆ ಎಂದು ನಮೂದಿಸುವುದು.
2. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ರೂ. 500/- ಡಿ.ಡಿ.ಯನ್ನು ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನಾ ವಿಭಾಗ ಜೆಸ್ಕಾಂ, ಕೊಪ್ಪಳ/ಗಂಗಾವತಿ ರವರ ಹೆಸರಿನಲ್ಲಿ ಪಡೆದು ಅರ್ಜಿಯ ಜೊತೆಗೆ ಕೊನೆಯ ದಿನಾಂಕದೊಳಗೆ ಕಡ್ಡಾಯವಾಗಿ ಸಂಬಂಧಪಟ್ಟ ವಿಭಾಗ ಕಛೇರಿಗೆ ಸಲ್ಲಿಸಬೇಕು. ಈ ಡಿ.ಡಿಯ ಮೊತ್ತವನ್ನು ಯಾವುದೇ ಕಾರಣಕ್ಕೆ ಹಿಂದಿರುಗಿಸಲು ಅವಕಾಶವಿರುವುದಿಲ್ಲ.
3. ಇತ್ತೀಚಿನ ಎರಡು ಭಾವಚಿತ್ರ (ಪಾಸ್ ಪೋರ್ಟ್ ಸೈಜ್) ಇವರಲ್ಲಿ ಒಂದನ್ನು ಅರ್ಜಿಗೆ ಅಂಟಿಸುವುದು.

| ಕ್ರ ಸಂ | ವಿಭಾಗದ ಹೆಸರು | ಉಪ-ವಿಭಾಗದ ಹೆಸರು | ಖಾಲಿ ಇರುವ ಪಂಚಾಯಿತಿಗಳು |
|---|---|---|---|
| 1 | ಕೊಪ್ಪಳ | ಯಲಬುರ್ಗಾ | ಮುರಡಿ, ಕುದರಿಮೋತಿ, ಬಾನಾಪುರ, ಗಾಣದಾಳ, ಸಂಕನೂರು, ತುಂಬರಗುದ್ದಿ, ಚಿಕ್ಕಮನ್ನಾಪುರ (ಬೋದೂರು) |
| | | ಮುನಿರಾಬಾದ್ | ವಣಬಳ್ಳಾರಿ |
| 2 | ಗಂಗಾವತಿ | ಗಂಗಾವತಿ | ಸಾಣಾಪುರ, ಜಂಗಮರ ಕಲ್ಗುಡಿ, ಆಗೋಲಿ, ಆನೆಗುಂದಿ, ಮರಳಿ, ಬಸಾಪಟ್ಟಣ. |
| | | ಕಾರಟಗಿ | ಮೈಲಾಪುರ, ಬರಗೂರು, ಜೀರಾಳ, ಮರ್ಲಾನಹಳ್ಳಿ |
| | | ಕುಷ್ಟಗಿ | ಶಿರಗುಂಪಿ, ಮುದೇನೂರು, ಹಿರೇನಂದಿಹಾಳ, ಲಿಂಗದಳ್ಳಿ, ಅಂಟರಠಾಣ, ಬಿಳೇಕಲ್, ಹಾಬಲಕಟ್ಟಿ, ತುಮರಿಕೊಪ್ಪ. |

### ಮೈಕ್ರೋ ಫೀಡರ್ ಫ್ರಾಂಚೈಸಿ (ಗ್ರಾಮ ವಿದ್ಯುತ್ ಪ್ರತಿನಿಧಿ) ಹುದ್ದೆಗಾಗಿ ಅರ್ಜಿ ನಮೂನೆ

| | | |
|---|---|---|
| ಅಭ್ಯರ್ಥಿ ಹೆಸರು ಮತ್ತು ವಿಳಾಸ | | ಇತ್ತೀಚಿನ ಭಾವಚಿತ್ರ |
| ತಂದೆ ಹೆಸರು | | |
| ವಿದ್ಯಾರ್ಹತೆ ಮತ್ತು ಪ್ರಮಾಣ ಪತ್ರ ಲಗತ್ತಿಸುವುದು | | |
| ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಪ್ರಮಾಣ ಪತ್ರದ ಪ್ರತಿ ಲಗತ್ತಿಸುವುದು | | |
| ವಾಸವಾಗಿರುವ ಗ್ರಾಮ ಪಂಚಾಯಿತಿ ಹೆಸರು | | |
| ತಮ್ಮ ಹೆಸರಿಗೆ ಇರುವ ಬ್ಯಾಂಕ್ ಪಾಸ್‌ಬುಕ್ಕಿನ ನಕಲು ಪ್ರತಿ ಲಗತ್ತಿಸುವುದು | | |
| ವಾಸಸ್ಥಳ ಪ್ರಮಾಣ ಪತ್ರ, ಸಂಬಂಧಪಟ್ಟ ತಹಶೀಲ್ದಾರ್/ಗ್ರಾಮ ಪಂಚಾಯಿತಿಯಿಂದ ಪಡೆದು ಸಲ್ಲಿಸುವುದು | | |
| ಹಣ ಪಾವತಿಯ ವಿವರ | | |
| ಬ್ಯಾಂಕಿನ ಹೆಸರು | | |
| ಡಿ.ಡಿ. ಸಂಖ್ಯೆ ಮತ್ತು ದಿನಾಂಕ | | |
| ಚುನಾವಣೆ ಗುರುತಿನ ಚೀಟಿ ಪ್ರತಿ ಲಗತ್ತಿಸುವುದು | | |
| ಆಧಾರ ಕಾರ್ಡ ಪ್ರತಿ ಲಗತ್ತಿಸುವುದು | | |
| ಮೊಬೈಲ್ ಸಂಖ್ಯೆ | | |

ಅಭ್ಯರ್ಥಿಯ ರುಜು

ಸಹಿ/- ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ವೃತ್ತ ಜೆಸ್ಕಾಂ, ಕೊಪ್ಪಳ ಕಾರ್ಯಸ್ಥಾನ ಮುನಿರಾಬಾದ್.

ಡಿಐಪಿಆರ್/ಕೊಪ್ಪಳ/671/ಎಂಸಿಎ/2019-20